**<u>ಸಾಕ್ಷಿಯನ್ನು ಪ್ರಮಾಣ ವಚನ ಬೋದಿಸಲಾದ ದಿನಾಂಕಃ 17-09-2025</u>**

**ದಾಖಲೆಗಳನ್ನು ಗುರುತಿಸುವುದಕ್ಕಾಗಿ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀಮತಿ. ಎಸ್ ಜಿ ಯು ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ನನಗೆ ಗೊತ್ತಿದ್ದು, ಅವುಗಳು ಸತ್ಯವಾಗಿವೆ ಮತ್ತು ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ.

1. ಚಲನವಲನ ಆದೇಶದ ಪ್ರತಿಯನ್ನು ನಿಆರ್.1 ಎಂದು ಗುರುತಿಸಲಾಯಿತು.
2. Divisional Controller NWKRTC Dharwad ಇವರು ನೀಡಿದ ಪತ್ರವನ್ನು ನಿಆರ್.2 ಎಂದು ಗುರುತಿಸಲಾಯಿತು.
3. Authorization letterನ್ನು ನಿಆರ್.3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>** ಅರ್ಜಿದಾರರ ಪರ ಶ್ರೀ.ಎಮ್ ಸಿ ಕೆ ವಕೀಲರಿಂದಃ

ಈಗ ನಾನು ಬಾಗಲಕೋಟೆ ಡಿಪೋದಲ್ಲಿ ಚಾಲಕನೆಂದು ಕೆಲಸ ಮಾಡುತ್ತಿದ್ದೇನೆ. ನಾನು 2017 ರಲ್ಲಿ ಚಾಲಕನೆಂದು ಸೇರಿಕೊಂಡಿದ್ದೆನೆ. 2017 ಮಾರ್ಚ ತಿಂಗಳಿನಲ್ಲಿ ದಾಂಡೆಲಿ ಡಿಪೋದಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ. ದಿನಾಂಕಃ 11-04-2022 ರಲ್ಲಿ ದಾಂಡೇಲಿಯಿಂದ ಗೋಕಾಕಕ್ಕೆ ಹೋಗಲು ಡಿಪೊದಲ್ಲಿ ಬಸ್ಸ ನಿಲ್ಲಿಸಿದ್ದೆ. ಬೆಳಿಗ್ಗೆ 7 ಗಂಟೆ ಸಮಯದಲ್ಲಿ ದಾಂಡೇಲಿಯಿಂದ ಹೋರಟೆ. ಅರ್ಜಿದಾರರು ನಾನು ಚಲಾಯಿಸುತ್ತಿದ್ದ ಬಸ್ಸಿ ನಲ್ಲಿ ಪ್ರಯಾಣಿಕರಾಗಿದ್ದರು. ಬಸ್ಸನಿಲ್ದಾಣ ಬಿಟ್ಟ ನಂತರ ನಾನು ದಾಂಡೆಲಿಯಲ್ಲಿ 3ನೇ ಗೇಟನಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ನಿಲ್ಲಿಸಿದ್ದೆ. 3ನೇ ಗೇಟ ಹತ್ತಿರ ಇರುವ ರಸ್ತೆಯು ಹಳಿಯಾಳ -ದಾಂಡೆಲಿ ರಸ್ತೆಯಾಗಿದ್ದು ಅದು ಪೂರ್ವ-ಪಶ್ಚಿಮವಾಗಿ ಇದೆ. ಸದರಿ ಹಳಿಯಾಳ ದಾಂಡೆಲಿ ರಸ್ತೆಯು ರಾಜ್ಯ

ಹೆದ್ದಾರಿ–46 ಎಂದರೆ ನನಗೆ ಗೊತ್ತಿಲ್ಲ. ಗೇಟ ನಂ.3 ಇದು ದಾಂಡೇಲಿ ನಗರ ಸಭೆ ವ್ಯಾಪ್ತಿಗೆ ಬರುತ್ತದೆ. ದಿನಾಂಕಃ 11.02.2022 ರಂದು ಸದರಿ ಗೇಟ ನಂ.3 ರಲ್ಲಿ ಇರುವ ರಸ್ತೆಯು ಸರಿಯಾಗಿ ಡಾಂಬರಿಕರಣ ಆಗಿರಲಿಲ್ಲ ಎಂದರೆ ಸರಿಯಲ್ಲ. ಗೇಟ ನಂ.3 ರಲ್ಲಿ ಆ ಸಮಯದಲ್ಲಿ ಕುಡಿಯುವ ನೀರಿನ ಪೈಪಗೆ ಸಂಬಂಧಿಸಿದಂತೆ ದುರಸ್ಥಿ ಕಾಮಗಾರಿ ನಡೆದಿತ್ತು ಎಂದರೆ ಸರಿ. ಆದ್ದರಿಂದ ಗೇಟ ನಂ.3 ರಲ್ಲಿ ರಸ್ತೆಯ ಬದಿಗೆ ತಗ್ಗು ಮತ್ತು ದಿಬ್ಬ ಆಗಿದ್ದವು ಎಂದರೆ ಸರಿ. ಗೇಟ ನಂ.3 ರಲ್ಲಿ ಬಸ್ಸನ್ನು ನಿಲ್ಲಿಸಿ ಆ ನಂತರ ಬಸ್ಸನ್ನು ಸ್ಟಾರ್ಟ ಮಾಡಿದ ನಂತರ 100 ಮೀಟರ ಹೋದ ಮೇಲೆ ಬ್ರೇಕ ಹಾಕಿ ಬಸ್ಸನ್ನು ನಿಲ್ಲಿಸಿದ್ದೆ ಅಂತಾ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿದೆ ಎಂದರೆ ಸರಿಯಲ್ಲ. ಗೇಟ ನಂ.3 ರಿಂದ ಬಸ್ಸನ್ನು ಒಮ್ಮೆಲೆ ಜೋರಾಗಿ ಚಲಾಯಿಸಿದ ನಂತರ ಅರ್ಜಿದಾರಳು ಹಿಂದಿನ ಸೀಟಿನಲ್ಲಿ ಕುಳಿತ್ತಿದ್ದಳು ಮೆಟ್ಟಿಲ ಮೇಲೆ ಬಿದ್ದು ಒಮ್ಮೆಲೆ ಜೋರಾಗಿ ಚೀರಿದ್ದರಿಂದ ನಾವು ಬಸ್ಸನ್ನು ನಿಲ್ಲಿಸಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅರ್ಜಿದಾರಳು ಮೊಬೈಲ ನೋಡಿಕೊಂಡು ಕುಳಿತ್ತಿದ್ದಳು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಅವಳು ಮೊಬೈಲ ನೋಡುತ್ತಿದ್ದ ಬಗ್ಗೆ ನಮ್ಮ ಕಂಡೆಕ್ಟರ ನನಗೆ ಹೇಳಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅರ್ಜಿದಾರಳು ಮೊಬೈಲ ನೋಡುತ್ತಿದ್ದಳು ಆ ಕಾರಣಕ್ಕಾಗಿ ಬಸ್ಸಿನಲ್ಲಿ ಬಿದ್ದಳು ಎಂದು ನಮೂದಿಸಿಲ್ಲ ಎಂದರೆ ಸರಿ. ಅರ್ಜಿದಾರಳು ಬಸ್ಸಿನ ಒಳಗೆ ಬಿದ್ದು ಗಾಯ ಆಗಿದ್ದರಿಂದ ಪ್ರಯಾಣಿಕರನ್ನು ಅಲ್ಲಿಯೇ ಇಳಿಸಿ ನಂತರ ನಾವು ಅರ್ಜಿದಾರಳನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿರುತ್ತೇವೆ. ಆಸ್ಪತ್ರಗೆ ಅವರ ಸಂಬಂಧಿಕರು ಬಂದ ನಂತರ ನಾವು ಬಸ್ಸನ್ನು ತೆಗೆದುಕೊಂಡು ಡಿಪೊಕೆ ವಾಪಸ್ಸ ಹೋಗಿರುತ್ತೇವೆ. ಸಾಕ್ಷಿ ಮುಂದುವರೆದು ಹೆಚ್ಚಿ ನ ಚಿಕಿತ್ಸೆಗಾಗಿ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ.

2. ದಿನಾಂಕಃ 11.04.2022 ರಂದು ನಮ್ಮ ತಪ್ಪಿ ನಿಂದ ಅಪಘಾತ ಆಗಿಲ್ಲ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯ ಸುಳ್ಳು ಇದೆ ಎಂದರೆ ಸರಿಯಲ್ಲ. ಅರ್ಜಿದಾರಳು ತಾನಾಗಿಯೇಬಿದ್ದು ಗಾಯಪಡಿಸಿಕೊಂಡಿದ್ದಾಳೆ ಎಂದು ಹೇಳಿರುವ ವಿಷಯ ಕೂಡಾ ಸುಳ್ಳು ಇದೆ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ಪರಿಹಾರ ಕೊಡುವುದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಹಿರಿಯ ದಿವಾಣಿ ಮತ್ತು ಜೆಎಂಎಫಸಿ ನ್ಯಾಯಾಧೀಶರು,**
**ಖಾನಾಪೂರ.**